ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) 1988-89 ಸಾಲಿನಲ್ಲಿ ಕಡೂರು ತಾಲ್ಲೂಕಿಗೆ ದಶಲಕ್ಷ ಬಾವಿ ಯೋಜನೆಯಡಿ ಬಾವಿ ಮಂಜೂರಾಗಿರುವುದಿಲ್ಲ

ಆ) ಲಕ್ಕೇನಹಳ್ಳಿ ಮತಗಟ್ಟೆ ಕಡೂರು ತಾಲ್ಲೂಕು ಹಾಗೂ ಬೀರನಹಳ್ಳಿ ಫಲಾನುಭವಿಗಳಿಗೆ ದಶ ಲಕ್ಷ ಬಾವಿ ಯೋಜನೆಯಲ್ಲಿ ಬಾವಿ ಮಂಜೂರಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗ ನಿವಾರಣೆ

2568 (3373) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗಕ್ಕೆ ಎಷ್ಟು ಜನರು ತುತ್ತಾಗಿರುವರು; ಸೋಂಕು ಎಷ್ಟು ಸಾಬೀತಾಗಿದೆ. ಹಾಗಿದ್ದಲ್ಲಿ, ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) 2001ನೇ ಸಾಲಿನಲ್ಲಿ ಕಡೂರು ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಒಟ್ಟು 51908 ರಕ್ತ ಲೇಪನಗಳನ್ನು ಸಂಗ್ರಹಿಸಿ ಪರೀಕ್ಷಿಸಿ ಅದರಲ್ಲಿ 9720 ಮಲೇರಿಯಾ ಪ್ರಕರಣಗಳು ಕಂಡುಬಂದಿರುತ್ತವೆ. ಇದೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 3 ಮರಣ ಪ್ರಕರಣಗಳು ಮಲೇರಿಯಾದಿಂದ ಎಂದು ದೃಡಪಟ್ಟಿರುತ್ತದೆ.

ಮಲೇರಿಯಾ ರೋಗ ನಿಟಹತ್ರಣಕ್ಕೆ ಕಡೂರು ತಾಲ್ಲೂಕಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸಮಸ್ಯೆಯಲ್ಲದ ಮಲೆನಾಡು ಪ್ರದೇಶಗಳಿಂದ ಪುರುಷ ಆರೋಗ್ಯ ಸಹಾಯಕರು ಮತ್ತು ಪ್ರಯೋಗಶಾಲಾ ತಂತ್ರಜ್ಞರನ್ನು ನಿಯೋಜಿಸಿ ತೀವ್ರ ಜ್ವರ ಸಮೀಕ್ಷೆ ಶೀಘ್ರ ಪರೀಕ್ಷೆ ಮತ್ತು ತ್ವರಿತ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ.

2. 2001ನೇ ಸಾಲಿನಲ್ಲಿ ಮೊದಲನೇ ಸುತ್ತಿಗೆ 5 ಮೆಟ್ರಿಕ್ ಟನ್ ಮೆಲಾಥಿಯಾನ್ ಕೀಟನಾಶಕವನ್ನು ಸಮಸ್ಯಾತ್ಮಕ ಗ್ರಾಮಗಳಲ್ಲಿ ರೋಗ ವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ

ಸಿಂಪಡಿಸಲಾಗಿದ್ದು ಆಗಸ್ಟ್ ತಿಂಗಳಿಗೆ 2ನೇ ಸುತ್ತಿಗೂ 5 ಮೆಟ್ರಿಕ್ ಟನ್ ಮೆಲಾಥಿಯನ್ ಮತ್ತು 440 ಕೆ.ಜಿ ಸಿಂಥಿಟಿಕ್ ಪೈರಿಥ್ರಾಯಿಡ್ ಕೀಟನಾಶಕವನ್ನು ಪೂರೈಸಲು ವ್ಯವಸ್ಥೆ ಮಾಡಲಾಗುತ್ತಿದೆ.

3. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ಸಭೆಯನ್ನು ಕರೆದು ಮಲೇರಿಯಾ ನಿಯಂತ್ರಣದಲ್ಲಿ ಸ್ಥಳೀಯ ಸಂಸ್ಥೆಗಳ ಮತ್ತು ಜನಸಾಮಾನ್ಯರ ಪಾತ್ರದ ಬಗ್ಗೆ ತಿಳುವಳಿಕೆ ನೀಡಿ ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ತಾಲ್ಲೂಕಿನಾದ್ಯಂತ ವ್ಯಾಪಕವಾಗಿ ನಡೆಸಲಾಗಿದೆ.

4. ಚಿಕ್ಕಮಗಳೂರು ಜಿಲ್ಲೆಗೆ 2001-02ನೇ ಸಾಲಿನಲ್ಲಿ 10 ಲಕ್ಷ ಕ್ಲೋರೋಕ್ವಿನ್ ಗುಳಿಗೆಗಳು 2 ಲಕ್ಷ ಪ್ರೈಮಾಕ್ವಿನ್ 450 ಆಂಪ್ಯೂಲ್ ಆರ್ಟಿಟಲ್ ಎಂಬ ಚುಚ್ಚು ಮದ್ದನ್ನು ಪೂರೈಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆ ಮತಿಯಿಂದ ಸಾಧನ ಸಾಮಗ್ರಿಗಳ ವಿತರಣೆ

2569(2416) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2000-2001ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಯಲ್ಲಿ ರಾಜ್ಯ ವಲಯದಿಂದ ಸಾಧನ ಸಾಮಗ್ರಿಗಳನ್ನು ಯಾವ ಯಾವ ಶಾಲೆಗಳಿಗೆ ಎಷ್ಟೆಷ್ಟು ಒದಗಿಸಲಾಗಿದೆ; ತಾಲ್ಲೂಕುವಾರು ವಿವರ ನೀಡುವುದು.

ಆ) ಸಾಧನ ಸಾಮಗ್ರಿಗಳಿಗೆ ಎಷ್ಟು ಹಣ ಖರ್ಚಾಗಿದೆ;

ಇ) ಇಂತಹ ಸಾಧನ ಸಾಮಗ್ರಿಗಳು ಯಾವುದಾದರೂ ಶಾಲೆಗಳ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2000-2001ನೇ ಸಾಲಿನ ಶಿಕ್ಷಣ ಇಲಾಖೆಯ ರಾಜ್ಯವಲಯದಿಂದ 8 ಸರ್ಕಾರಿ ಪ್ರೌಢಶಾಲೆಗಳಿಗೆ ಹಾಗೂ 53 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಾಧನ ಸಾಮಗ್ರಿಗಳನ್ನು ಪೂರೈಸಿದೆ. (ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ)